**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>**

**<u>ಸಿ.ಸಿ.ನಂ.118/2019</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ಸಿದ್ದಪ್ಪ ಹಾವೇರಣ್ಣನವರ | ಸಿಡಬ್ಲ್ಯೂ | 5 |
| ತಂದೆ ಹೆಸರು | ಸದಾಶಿವಪ್ಪ | ಪಿಡಬ್ಲ್ಯೂ | 4 |
| ವಯಸ್ಸು | 29 ವರ್ಷ | | |
| ಉದ್ಯೋಗ | ಚಾಲಕ | | |
| ವಾಸಸ್ಥಳ | ಬೆನಕನಹಳ್ಳಿ ತಾಃ ಹಾವೇರಿ | | |

**<u>ದಿಃ 25.09.2023 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.</u>**

**1).** ಆರೋಪಿತರು ಗೊತ್ತು, ಚಾ.ಸಾ-1 ಗೊತ್ತು. 2 ನೇ ಆರೋಪಿ ಚಾ.ಸಾ-1 ರವರಿಗೆ ಹೊಡೆದು ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದ. ನಂತರ ಚಾ.ಸಾ-1 ರವರ ಅಣ್ಣ ಬಂದು ಆಕೆಯನ್ನು ಕಲಗುಡ್ಡಿಗೆ ಕರೆದುಕೊಂಡು ಹೋದರು. ನಂತರ 2 ನೇ ಆರೋಪಿ 4 ನೇ ಆರೋಪಿಯನ್ನು ನಮ್ಮ ಗ್ರಾಮದಲ್ಲಿ ಎರಡನೇ ಮದುವೆಯಾಗಿದ್ದಾನೆ. ನಾನು ಆ ಮದುವೆಗೆ ಹೋಗಿದ್ದೆ. ಸಾಕ್ಷಿಗೆ 2 ಮತ್ತು 4 ನೇ ಆರೋಪಿಯ ಮದುವೆಯ 17 ಪೋಟೋಗಳನ್ನು ಗುರುತಿಸಿರುತ್ತಾರೆ. ಅವುಗಳನ್ನು ನಿ.ಪಿ-4 ರಿಂದ ನಿ.ಪಿ-20 ಎಂದು ಗುರುತಿಸಲಾಯಿತು.

**2)** ಸಾಕ್ಷಿಗೆ 2 ಮತ್ತು 4 ನೇ ಆರೋಪಿತರ ಲಗ್ನ ಪತ್ರಿಕೆಯನ್ನು ತೋರಿಸಿದ್ದು, ನೋಡಿ ಗುರುತಿಸಿ ನಮಗೂ ಲಗ್ನ ಪತ್ರಿಕೆಯನ್ನು ಕೊಟ್ಟಿದ್ದರು ಎಂದು ಉತ್ತರಿಸಿದ್ದಾರೆ. ಅದನ್ನು ನಿ.ಪಿ-21 ಎಂದು ಗುರುತಿಸಲಾಯಿತು. ನಾನು, ನನ್ನ ಅಣ್ಣ ಎರಡನೇ ಮದುವೆ ಮಾಡಿಕೊಳ್ಳಬೇಡ ಎಂದು 2 ನೇ ಆರೋಪಿಗೆ ಹೇಳಿದ್ದರೂ, 2 ನೇ ಮದುವೆ ಮಾಡಿಕೊಂಡಿದ್ದಾನೆ. 2 ನೇ ಆರೋಪಿ ಚಾ.ಸಾ-1 ರವರಿಗೆ ಮನೆಬಿಟ್ಟು ಹೋಗದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕುತ್ತಿದ್ದ. ಈಗ್ಗೆ 5 ವರ್ಷಗಳ ಹಿಂದೆ 2 ನೇ ಆರೋಪಿ 4 ನೇ ಆರೋಪಿಯೊಂದಿಗೆ ಎರಡನೇ ಮದುವೆ ಮಾಡಿಕೊಂಡಿದ್ದಾನೆ. 2 ನೇ ಆರೋಪಿ ಚಾ.ಸಾ1 ರವರನ್ನು ಸುಮಾರು 25 ವರ್ಷಗಳ ಹಿಂದೆ ಮದುವೆಯಾಗಿರುತ್ತಾನೆ. ಚಾ.ಸಾ-1 ರವರಿಗೆ 18 ವರ್ಷದ ರಾಧಿಕಾ ಎಂಬ ಮಗಳು ಇದ್ದಾಳೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಚಾ.ಸಾ-10 ಕೊಟ್ರೇಶರವರು ಮದುವೆಯ ಪೋಟೋಗಳನ್ನು ತೆಗೆದಿದ್ದಾನೆ.

**ಪಾಟೀ ಸವಾಲುಃ ಶ್ರೀ.ಎಸ್.ಎನ್.ಹೆಚ್ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇರುವದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.